**ಸ್ವಾಮೀಜಿ:** ಇವತ್ತು ನಾನು ನಿಮಗೆ ಜೀವನದಲ್ಲಿ ಮುಂದೆ ಬರುವುದು ಹೇಗೆ ಅಂತ ಹೇಳಿಕೊಡ್ತೀನಿ.
**ಭಕ್ತರು:** ಹೇಳಿಕೊಡಿ ಗುರುಗಳೇ ಪುಣ್ಯ ಬರುತ್ತೆ.
**ಸ್ವಾಮೀಜಿ:** ಮೊದಲು ನಿಮ್ಮ ಬಲಗಾಲನ್ನು ಮುಂದೆ ಇಡಿ. ಆಮೇಲೆ ನಿಮ್ಮ ಎಡಗಾಲನ್ನು ಮುಂದೆ ಇಡಿ ಅಷ್ಟೇ. ಹಾಗೆ ಮುಂದೆ ನಡೆದುಕೊಂಡು ಹೋಗಿ, ಮುಂದೆ ಬರುತ್ತೀರಿ.


**ಟೀಚರ್:** ಪ್ರತಿಯೊಂದು ಪಕ್ಷಿಯು ಸಾವಿರಾರು ಕಿಲೋಮೀಟರ್ ಹಾರುತ ವಲಸೆ ಹೋಗುತ್ತವಲ್ಲ ಯಾಕೆ ಹೇಳಿ.
**ಚಿಂಟು:** ಏಕೆಂದರೆ ಅಷ್ಟು ದೂರ ಅವು ನಡೆಯಲಾರವು ಅದಕ್ಕೆ ಮಿಸ್!

**ಟೀಚರ್:** ಮಕ್ಕಳೆ ನೀವೆಲ್ಲ ಯುದ್ಧದಲ್ಲಿದ್ದಿರಿ ಎಂದು ಊಹಿಸಿಕೊಂಡು ಒಂದು ಪ್ರಬಂಧ ಬರೆಯಿರಿ.
(ಐದು ನಿಮಿಷಗಳ ನಂತರ)
**ಟೀಚರ್:** ಬಂಟಿ ನೀನೇಕೆ ಬರೆಯದೆ ಸುಮ್ಮನೆ ಕುಳಿತಿರುವೆ?
**ಬಂಟಿ:** ಯುದ್ಧದ ಆರಂಭದಲ್ಲೇ ಶತ್ರುಗಳು ನನ್ನ ಕೊಂದುಬಿಟ್ಟರು ಟೀಚರ್!

**ಟೀಚರ್:** ಬಿರುಗಾಳಿಯೊಂದಿಗೆ ಗುಡುಗು ಸಹಿತ ಭಾರಿ ಮಳೆ ಆಗುತ್ತಿದೆ ಅನ್ನೋ ವಾಕ್ಯದ ಭವಿಷ್ಯತ್ ಕಾಲ ತಿಳಿಸಿ.
**ಸಿದ್ದೇಶ:** ಆಗ ಕರೆಂಟ್ ಹೋಗುತ್ತಿ ಟೀಚರ್!



ಹಳೇ ಬೀರು ಗುಜರಿಗೆ ಹಾಕೋಣ ಅಂತಿದ್ರಲ್ಲಾ, ನೋಡಿ ಎಷ್ಟು ಉಪಯೋಗಕ್ಕೆ ಬರ್ತಿದೆ..!!




ಒಂದು ಬಾರಿ ಒಂದಷ್ಟು ಮಹಿಳೆಯರೇ ಸೇರಿ ಪ್ರಯಾಣ ಹೊರಟಿದ್ದರು. ಆದರೆ ಅವರು ಪ್ರಯಾಣಿಸುತ್ತಿದ್ದ ಬಸ್ ಅಪಘಾತವಾಗಿ, ಅದರಲ್ಲಿದ್ದ ಅಷ್ಟೂ ಮಹಿಳೆಯರು ಪ್ರಾಣ ಕಳೆದುಕೊಂಡರು. ಘಟನೆಯ ಸ್ಥಳಕ್ಕೆ ಬಂದ ಅವರ ಪತಿಯಂದಿರು ದುಃಖದಿಂದ ರೋದಿಸುತ್ತಿದ್ದರು. ಸ್ವಲ್ಪ ಸಮಯ ರೋದಿಸಿದ ನಂತರ ಅವರೆಲ್ಲ ಸಮಾಧಾನಗೊಂಡು ಮುಂದಿನ ಕಾರ್ಯಕ್ಕೆ ಅಣಿಯಾಗತೊಡಗಿದರು. ಆದರೆ ಅಲ್ಲಿ ಒಬ್ಬ ಮಾತ್ರ ಅಳು ನಿಲ್ಲಿಸದೆ ಹೊರಳಾಡಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ. ಅದನ್ನು ಗಮನಿಸಿದ ಉಳಿದವರು, ‘ಯಾಕಪ್ಪ ನಿನ್ನ ಹೆಂಡತಿ ಕೂಡ ಇದೇ ಬಸ್ ಅಪಘಾತದಲ್ಲಿ ತೀರಿಕೊಂಡಳೇ’ ಎಂದು ಕೇಳಿದರು. ಅದಕ್ಕೆ ಅವನು ಇಲ್ಲ ಇಲ್ಲ ಅವಳು ಇದೇ ಬಸ್‌ನಲ್ಲಿ ಪ್ರಯಾಣಿಸಬೇಕಿತ್ತು. ಆದರೆ ಕೊನೆ ಗಳಿಗೆಯಲ್ಲಿ ಬಸ್ ಮಿಸ್ ಮಾಡಿಕೊಂಡಳು ಎನ್ನುತ್ತಾ ಪುನಃ ಜೋರಾಗಿ ಅಳತೊಡಗಿದ.

**ಗುಂಡ:** ಹೆಂಡತಿ, ಮನೆ ಕಟ್ಟುವ ಮೇಸ್ತ್ರಿ ಜೊತೆ ವಿರೋಧ ಇಟ್ಟುಕೊಳ್ಳಬಾರದು?
**ತಿಮ್ಮ:** ಏಕೆ?
**ಗುಂಡ:** ಏಕೆಂದರೆ ಇಬ್ಬರು ಮನೆ ಆಕಾರವನ್ನೇ ಬದಲಾಯಿಸಿ ಬಿಡ್ತಾರೆ.

ಒಂದು ಹೆಣ್ಣು ಒಬ್ಬಳೇ ಕೂತು ಅಳ್ತಿದಾಳೆ ಅಂದ್ರೆ ಅದು ‘ಸೀರಿಯಸ್’ ವಿಷಯ. ಅದೇ ನಾಲ್ಕು ಜನ ಹೆಣ್ಮಕ್ಳು ಕೂಡಿ ಅಳ್ತಿದಾರೆ ಅಂದ್ರೆ ಅದು ‘ಸೀರಿಯಲ್’ ವಿಷಯ.

**ಸುಬ್ಬಿ:** ಕಟ್ಕೊಂಡಿರುವ ಹೆಂಡತಿ ಮತ್ತು ಹೆಲ್ಮೆಟ್ ಎರಡು ಒಂದೇ ನೋಡು.
**ಸುಬ್ಬ:** ಓಹೋ ಅದು ಹೆಂಗೆ?
**ಸುಬ್ಬಿ:** ಎರಡನ್ನೂ ತಲೆಯ ಮೇಲೆ ಇಟ್ಕೊಳ್ದಿದ್ರೆ ಜೀವಕ್ಕೆ ಅಪಾಯ.

**ಅಪ್ಪ:** ಕುಡಿದು ಬೈಕ್ ನಡೆಸಬೇಡ ಮಗನೇ ಅಪಘಾತ ಆಗುತ್ತದೆ.
**ಮಗ:** ಅಪ್ಪ, ನೀವು ಕುಡಿದು ನನಗೆ ಫೋನ್ ಮಾಡಬೇಡಿ ಅಂತ ಎಷ್ಟು ಬಾರಿ ಹೇಳಬೇಕು.
**ಅಪ್ಪ:** ನಾನು ಕುಡಿದಿದ್ದೇನೆ ಅಂತ ನಿನಗೆ ಹೇಗೆ ಗೊತ್ತಾಯ್ತು?
**ಮಗ:** ಹೇಗೆಂದರೆ, ನನಗೆ ನೀವು ಇನ್ನೂ ಬೈಕ್ ಕೊಡಿಸಿಯೇ ಇಲ್ಲ.

**ಕಲ್ಲೇಶಿ:** ನಮ್ಮನೆಯ ಗೃಹ ಪ್ರವೇಶಕ್ಕೆ ಯಾಕ್ಲಾ ಬರಲಿಲ್ಲ?
**ಮಲ್ಲೇಶಿ:** ಬರಬೇಕು ಅಂದುಕೊಂಡಿದ್ದೆ ಕಣ್ಲಾ. ಆದ್ರೆ ಯಾವ ಕಲ್ಯಾಣ ಮಂಟಪದಲ್ಲಿ ಅಂತ ಗೊತ್ತಿರಲಿಲ್ಲ, ಅದಕ್ಕೆ ಬರೊಕಾಗ್ಲಿಲ್ಲ.

**ಪತಿ:** (ರೊಮ್ಯಾಂಟಿಕ್ ಮೂಡ್‌ನಲ್ಲಿ) ಆಕಾಶದಲ್ಲಿರುವ ಚುಕ್ಕೆಗಳ ತಂದು ಮುಡಿಗಿಡಲೇ, ತಿರುಗುತ್ತಿರುವ ಭೂಮಿಯನ್ನು ನಿಲ್ಲಿಸಲೇ?
**ಪತ್ನಿ:** ತಿರುಗದೆ ನಿಂತಿರುವ ಈ ಮಿಕ್ಸಿ ಸರಿಮಾಡಿ ಮೊದಲು.

**ಡಾಕ್ಟರ್:** ಬೆಳಿಗ್ಗೆ ಎದ್ದ ತಕ್ಷಣ ಬಿಸಿನೀರು ಕುಡಿಯಬೇಕು.
**ತಿಮ್ಮ:** 25 ವರ್ಷದಿಂದ ಕುಡಿತಾ ಇದ್ದೀನಿ ಡಾಕ್ಟ್ರೆ, ನನ್ನ ಹೆಂಡತಿ ಕಾಫಿ ಅಂತ ಕೊಡ್ತಾಳೆ, ಆದ್ರೆ ಅದು ನಿಜವಾಗಿಯೂ ಬಿಸಿ ನೀರೇ.

**ಕಲ್ಲೇಶಿ:** ನಾನು ಇನ್ನು ಮೇಲೆ ಹೆಣ್ಣು ನೋಡೋಕೆ ಹೋಗೋದಿಲ್ಲ.
**ಮಲ್ಲೇಶಿ:** ಯಾಕೋ ಅಷ್ಟೊಂದು ಬೇಜಾರು ಮಾಡ್ಕೊಂಡಿದ್ದೀಯಾ?
**ಕಲ್ಲೇಶಿ:** ಇನ್ನೇನು ಮತ್ತೆ. ಯಾವಾಗಲೂ ನಾನೇ ಹೋಗಬೇಕಾ? ಬಸ್ ಚಾರ್ಜ್ ಫ್ರೀ ಇದೆಯಲ್ಲಾ ಅವರೇ ಬರಲಿ ಬಿಡು.

ಸಂಗ್ರಹ: ಶರದ ಕುಲಕರ್ಣಿ, ಬೀದರ್